ಕೂಲತೆ, ಸುಖ-ಸಲವತ್ತುಗಳನ್ನು ಒದಗಿಸುವ ಮೂಲಕ ಪ್ರವಾಸೋದ್ಯಮ ಸಾಕಷ್ಟು ಅಭಿವೃದ್ಧಿ ಹೊಂದುವುದು ಎಂಬ ದೃಷ್ಟಿಕೋನದಿಂದಲೇ ಸರಕಾರ ಹಾಗೂ ಇತರ ಸಂಸ್ಥೆಗಳು ಕಾರ್ಯನಿರತವಾಗಿವೆ. ಇದರಿಂದ ಪ್ರವಾಸ, ಯಾತ್ರೆ ಮಾಡುವವರಿಗೆ ಅನುಕೂಲವೇನೋ ಆಗುತ್ತದೆ; ಆದರೆ ಹಲವು ಮಂದಿ ವ್ಯಾಪಾರದ ನಿಮಿತ್ತ ಸತ್ಯಕ್ಕೆ ದೂರವಾದ ಕಥೆ ಪುರಾಣಗಳನ್ನು ಪ್ರಚಾರ ಮಾಡುವುದು, ಅನೇಕ ಬಾರಿ ಮೋಸ, ವಂಚನೆಗಳಿಂದ ಯಾತ್ರಿಕರಿಗೆ ತೊಂದರೆಯನ್ನುಂಟು ಮಾಡುವುದು, ಬಲವಂತವಾಗಿ 'ಸೇವೆ' ಮಾಡಿಸುವ ಮೂಲಕ ಹಣ ದೋಚುವುದು ಇವುಗಳಿಂದ ಯಾತ್ರೆಗೆ ಬಂದವರಿಗೆ ಹಾನಿಯಾಗದೆ? ವ್ಯಾಪಾರೀಕರಣದಿಂದ ಇವೆಲ್ಲ ತೊಂದರೆಗಳಾಗಿವೆ. ಆದರೆ, ಲಾಭಗಳಿಸುವ ಭರದಲ್ಲಿ ಶ್ರದ್ಧಾಳುಗಳ ಭಕ್ತಿ, ವಿಶ್ವಾಸಕ್ಕೆ ಹಾನಿಯಾಗದಂತೆ ತಡೆಯುವುದು ಆಡಳಿತ ಇಲಾಖೆಗಳ ಕರ್ತವ್ಯವಾಗಿದೆ. ಭಾರತದಲ್ಲಿ ಕೇವಲ ಪ್ರವಾಸ ಮಾಡುವವರಿಗಿಂತ, ಧಾರ್ಮಿಕ ದೃಷ್ಟಿಯಿಂದ ಯಾತ್ರೆ ಹೋಗುವವರ ಸಂಖ್ಯೆಯೇ ಹೆಚ್ಚು ಎನ್ನುವುದನ್ನು ಗಮನದಲ್ಲಿಡಬೇಕು.

ಕಾಲ ಬದಲಾಗುತ್ತಿದೆ; ಸೌಕರ್ಯಗಳೂ ಹೆಚ್ಚುತ್ತಿವೆ. ಹಿಂದೆ ಕಾಶಿ, ಪ್ರಯಾಗ, ಪ್ರಭಾಸಗಳಿಗೆ ಹೋಗುವವನು ಮರಳಿ ಬರುತ್ತಾನೆ ಎಂಬ ಭರವಸೆಯಿಲ್ಲದ ದಿನಗಳೂ ಇದ್ದವು. ಕಾರಣ, ಬಹುತೇಕ ಕಾಲ್ನಡಿಗೆಯಲ್ಲೇ ಯಾತ್ರೆ ಹೋಗುತ್ತಿದ್ದರು. ದೂರದ ಯಾತ್ರೆ ಮುಗಿಸಿ ಬರಲು ಅನೇಕ ವರ್ಷಗಳೇ ತಗಲುತ್ತಿದ್ದವು. ಈಗ ಮೋಟಾರ್ ವಾಹನಗಳು, ರೈಲು, ವಿಮಾನಗಳು ಬಂದಿವೆ; ಕೆಲವೇ ಗಂಟೆಗಳಲ್ಲಿ ದೇಶದ ಒಂದು ತುದಿಯಿಂದ ಇನ್ನೊಂದು ತುದಿ ತಲುಪಬಲ್ಲೆವು. ಸಾಕಷ್ಟು ಸಿದ್ಧತೆ ಮಾಡಿಕೊಳ್ಳಲು ನಾನಾ ಬಗೆಯ ಪ್ರವಾಸ ಮಾಹಿತಿಯ ಸಾಹಿತ್ಯಗಳು ಲಭ್ಯವಿವೆ; ಇಂಟರ್‌ನೆಟ್ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಹಿಂದೆ ಕೈಕಾಲು ಗಟ್ಟಿ ಇರುವವರು ಮಾತ್ರ ಕೇದಾರ, ಅಮರನಾಥ, ಕೈಲಾಸಯಾತ್ರೆ ಮಾಡಬಹುದಾಗಿತ್ತು; ಇಂದು ಹೆಲಿಕಾಪ್ಟರ್ ಸೇವೆಯ ಮೂಲಕ ವೃದ್ಧರೂ, ನಿಶ್ಶಕ್ತರೂ ಭಗವಂತನ ದರ್ಶನ ಮಾಡಬಹುದಾಗಿದೆ. ಇವೆಲ್ಲ ಅನುಕೂಲತೆಗಳನ್ನು ಉಪಯೋಗಿಸಿಕೊಂಡು ಯಾತ್ರೆಯನ್ನು ಸುಲಭವಾಗಿ ಮಾಡಬಹುದು. ಆದರೆ ಹಿಂದೆ ವರ್ಷಗಟ್ಟಲೆ ನಡೆದು, ಕಷ್ಟಪರಂಪರೆಗಳಿಗೂ ಒಗ್ಗದೆ, ಹಲವು, ಬಾಯಾರಿಕೆ, ಅನಾರೋಗ್ಯಗಳಿಂದ ಕುಗ್ಗದೆ ಕೊನೆಗೊಮ್ಮೆ ತೀರ್ಥಯಾತ್ರೆ ಮುಗಿಸಿ 'ಜನ್ಮ ಸಾರ್ಥಕವಾಯಿತಪ್ಪಾ' ಎಂದು ನಿಟ್ಟುಸಿರು ಬಿಡುತ್ತಿದ್ದ ಯಾತ್ರಿಕರಿಗಿದ್ದ ಶ್ರದ್ಧೆ, ಭಕ್ತಿ ನಮಗಿದೆಯೆ? ಎಲ್ಲವೂ ಸುಲಭವಾಗಿ, ಅನುಕೂಲಕರವಾಗಿ ಲಭ್ಯವಾದಾಗ, ವಸ್ತುವಿನ ಬೆಲೆ ನಮಗೆ ತಿಳಿಯುವುದಿಲ್ಲ ಎನ್ನುತ್ತಾರೆ. ಕಾಲದ ಇಂತಹ ಸವಾಲನ್ನು ಎದುರಿಸಿಕೊಂಡೂ ನಾವು ಹಿಂದಿನ ತಲೆಮಾರಿನವರ ಶ್ರದ್ಧೆ, ಚೈತನ್ಯ, ವಿಶ್ವಾಸಗಳನ್ನು ಉಳಿಸಿಕೊಳ್ಳಬಲ್ಲೆವೆ?

ತೀರ್ಥಯಾತ್ರೆಗೆ ಮುನ್ನ ಈ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅಗತ್ಯವೆನಿಸುತ್ತದೆ.



ನಮ್ಮ ಧರ್ಮವೇ ಸರಿ, ಉಳಿದವರದೆಲ್ಲ ತಪ್ಪು, ಎಂಬ ಭಾವನೆ ಒಳ್ಳೆಯದಲ್ಲ. ಭಗವಂತ ಒಬ್ಬನೇ ವಿನಾ ಇಬ್ಬರಲ್ಲ. ಆತನನ್ನು ಭಿನ್ನ ಭಿನ್ನ ಹೆಸರಿನಿಂದ ಬೇರೆ ಬೇರೆ ಜನರು ಕರೆಯುತ್ತಾರೆ. ಪ್ರತಿಯೊಂದು ಧರ್ಮವೂ ಭಗವಂತನ ಸಾಕ್ಷಾತ್ಕಾರಕ್ಕೆ ಒಂದೊಂದು ಮಾರ್ಗ. ವಿವಿಧ ದಿಕ್ಕುಗಳಿಂದ ಹರಿದು ಬಂದ ನದಿಗಳು ಎಲ್ಲವೂ ಸಾಗರದಲ್ಲಿ ಐಕ್ಯವಾಗುವ ಹಾಗೆ.

– ಶ್ರೀರಾಮಕೃಷ್ಣ ಪರಮಹಂಸ



ಎಲ್ಲ ಕಷ್ಟಗಳೂ ಒಬ್ಬನ ಕರ್ಮದ ಫಲವಾಗಿಯೇ ಬರುವುವು. ಆದ್ದರಿಂದ ತನ್ನ ಕಷ್ಟಗಳಿಗೆ ಇತರರನ್ನು ಹೊಣೆಗಾರರನ್ನಾಗಿ ಮಾಡುವ ಬದಲು, ಭಗವಂತನ ಕೃಪೆಗಾಗಿ ಪ್ರಾರ್ಥಿಸಬೇಕು. ಭಗವಂತನನ್ನೇ ಸದಾ ಅವಲಂಬಿಸಿರಬೇಕು. ಎಲ್ಲ ಸಂದರ್ಭಗಳಲ್ಲೂ ಸಹನೆಯಿಂದ ಹಾಗೂ ತಾಳ್ಮೆಯಿಂದ ಎಲ್ಲ ಕಷ್ಟಗಳನ್ನೂ ತಾಳಿಕೊಳ್ಳಲು ಯತ್ನಿಸಬೇಕು.

–ಶ್ರೀಮಾತೆ ಶಾರದಾದೇವಿ



ಇತರರಿಗಾಗಿ ಅನುಕಂಪಪಡುವ ಹೃದಯವಿಲ್ಲದೆ ಹೋದರೆ ಪ್ರಯೋಜನವಿಲ್ಲ. ವೇದ ಬೋಧಿಸುವಂತೆ ಅವರಿಗಾಗಿ ಅನುತಾಪಪಡಿ. ಅವರೇ ನಿಮ್ಮ ದೇಹದ ಒಂದು ಭಾಗ ಎಂದು ನೋಡಿ. ದರಿದ್ರರು, ಶ್ರೀಮಂತರು, ಪಾಪಿಗಳು, ಯತಿಗಳು ಎಲ್ಲರೂ ವಿರಾಟ್ ಬ್ರಹ್ಮನ ಅಂಶವೆಂದು ನೋಡಿ.

–ಸ್ವಾಮಿ ವಿವೇಕಾನಂದ